f ದಿಃ 23.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಶ್ರೀ ಸಿ.ಆರ್.ಕೆ., 1 ನೇ ಪ್ರತಿವಾದಿಯ ವಾರಸುದಾರರ ಪರ ವಕೀಲರಿಂದಃ

ನಾನು 1 ನೇ ಪ್ರತಿವಾದಿಯ 1 ನೇ ವಾರಸುದಾರರಾದ ರಾಮಸ್ವಾಮಿರವರ ಮಗನಾಗಿರುತ್ತೇನೆ. ನನ್ನ ತಂದೆಯವರು ನನಗೆ ಅವರ ಪರವಾಗಿ ಸಾಕ್ಷಿ ನುಡಿಯಲು ಅಧಿಕಾರ ಪತ್ರವನ್ನು ನೀಡಿರುತ್ತಾರೆ. ನಾನು ಸಂಬಂಧಿತ ಅಧಿಕಾರ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಈಗ ನನಗೆ ತೋರಿಸಿರುವ ದಾಖಲೆಯು ಸಂಬಂಧಿತ ಅಧಿಕಾರ ಪತ್ರ ಆಗಿದೆ. ಇದನ್ನು ನಿ.ಡಿ-21 ಎಂದು ಗುರುತಿಸಲಾಯಿತು.

2. ನಾನು ಈ ದಿನ ನನ್ನ ಸಾಕ್ಷ್ಯ ಹೇಳಿಕೆ ಬಾಬ್ತು ನ್ಯಾಯಾಲಯಕ್ಕೆ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ನನ್ನ ಹೇಳಿಕೆ ಮೇರೆಗೆ ಈ ಪ್ರಮಾಣ ಪತ್ರಿಕೆಯನ್ನು ತಯಾರಿಸಲಾಗಿದೆ. ಇದರಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿದೆ.

ವಾದಿ ಮತ್ತು ವಾದಿ ಪರ ವಕೀಲರು ಗೈರುಹಾಜರಾಗಿರುತ್ತಾರೆ. 16 ಮತ್ತು 17 ನೇ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿರುತ್ತಾರೆ. ಅದರಂತೆ ಪಾಟಿಸವಾಲನ್ನು ಮುಂದೂಡಲಾಗಿದೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಮುರಲಿಧರ ಪೈ ಬಿ.)
ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.